ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

## :ಎಸ್.ಎಸ್.ಎಲ್.ಸಿ. ಪ್ರಶ್ನೆ ಪತ್ರಿಕೆ ಸ್ವರೂಪ ಬದಲಾವಣೆ:

ಪಠ್ಯವಸ್ತುವನ್ನು ಪರಿಷ್ಕರಿಸುವುದು, ಪಠ್ಯಪುಸ್ತಕಗಳನ್ನು ಅದಕ್ಕೆ ತಕ್ಕಂತೆ ರಚಿಸುವುದು, ಶಿಕ್ಷಕರಿಗೆ ತರಬೇತಿಯನ್ನು ನೀಡುವುದು, ಮೌಲ್ಯಮಾಪನವನ್ನು ಅದಕ್ಕನುಗುಣವಾಗಿ ರೂಪಿಸುವುದು, ಇವೆಲ್ಲವೂ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗಿದೆ. ರೂಪಣಾತ್ಮಕ ಮೌಲ್ಯಮಾಪನ ಮತ್ತು ಸಂಕಲನಾತ್ಮಕ ಮೌಲ್ಯಮಾಪನಗಳು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಆಧಾರ ಸ್ಥಂಭಗಳಾಗಿವೆ. ರೂಪಣಾತ್ಮಕ ಮೌಲ್ಯಮಾಪನವು ವಿದ್ಯಾರ್ಥಿಗಳ ಕಲಿಕೆಯನ್ನು ಚಟುವಟಿಕೆಗಳ ಮೂಲಕ ಗುರುತಿಸುತ್ತಲೇ, ಶಿಕ್ಷಕರ ಬೋಧನಾ ಕೌಶಲಗಳನ್ನು ಸುಧಾರಿಸುವಲ್ಲಿ ಸಹಕರಿಸುತ್ತದೆ. ಮಕ್ಕಳ ಬೌದ್ಧಿಕ ಮಟ್ಟವನ್ನು ಅಳತೆಮಾಡುವಲ್ಲಿ ಸಾಧನಾ ಪರೀಕ್ಷೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಶೈಕ್ಷಣಿಕ ವರ್ಷದ ಕೊನೆಯಲ್ಲಿ ಮಾಡುವ ಸಂಕಲನಾತ್ಮಕ ಮೌಲ್ಯಮಾಪನವು ಸಾಧನಾ ಪರೀಕ್ಷೆಗಳನ್ನು ಒಳಗೊಂಡಿರುತ್ತವೆ.

ಒಂದು ಮಗುವು ತನ್ನ 10 ವರ್ಷಗಳ ಶಾಲಾ ಶೈಕ್ಷಣಿಕ ಜೀವನದ ಕೊನೆಯಲ್ಲಿ ಎದುರಿಸುವ ಪರೀಕ್ಷೆಯೇ ಎಸ್.ಎಸ್.ಎಲ್.ಸಿ ಪರೀಕ್ಷೆ. ಈ ಪರೀಕ್ಷೆಯ ಸಾಧನೆಯು ವಿದ್ಯಾರ್ಥಿಗಳ ಜೀವನದ ಮೈಲಿಗಲ್ಲಾಗಿರುತ್ತದೆ. ಸಹಜವಾಗಿಯೇ ಈ ಪರೀಕ್ಷೆಯ ಮೇಲೆ, ವಿದ್ಯಾರ್ಥಿಗಳು, ಶಿಕ್ಷಕರು, ಆಡಳಿತ ಮಂಡಳಿಗಳು, ಅಧಿಕಾರಿಗಳು, ಪೋಷಕರು ಬಹಳಷ್ಟು ನಿರೀಕ್ಷೆಯನ್ನು ಇಟ್ಟುಕೊಂಡಿರುತ್ತಾರೆ. ಹಾಗಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಅತ್ಯಂತ ಎಚ್ಚರಿಕೆಯಿಂದ ನಿರೀಕ್ಷೆಗೆತಕ್ಕಂತೆ ಸಿದ್ಧಪಡಿಸಬೇಕಾದ ಗುರುತರವಾದ ಜವಾಬ್ದಾರಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯ ಮೇಲಿರುತ್ತದೆ. ಪಠ್ಯಪುಸ್ತಕಗಳು ಬದಲಾದಂತೆ, ಪ್ರಶ್ನೆಪತ್ರಿಕೆಯ ವಿನ್ಯಾಸವನ್ನು ಕಾಲಕಾಲಕ್ಕೆ ಮಾರ್ಪಾಡು ಮಾಡುತ್ತಾ ಬಂದಿರುವ ಮಂಡಳಿ ಈ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದೆ.

2017–18ನೇ ಶೈಕ್ಷಣಿಕ ವರ್ಷದಲ್ಲಿ ಭಾಷಾವಾರು ವಿಷಯಗಳು ಪರಿಷ್ಕೃತವಾಗಿರುತ್ತವೆ. 2018–19ನೇ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿಯ ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ಕೇಂದ್ರೀಯ ಪಠ್ಯಕ್ರಮದ ಪಠ್ಯವಸ್ತುವನ್ನು ಆಧರಿಸಿದ ಪಠ್ಯಪುಸ್ತಕಗಳನ್ನೇ ಯಥಾವತ್ತಾಗಿ ರಾಜ್ಯದಲ್ಲಿಯೂ ಸಹ ಅಳವಡಿಸಲಾಗಿದೆ. ರಾಜ್ಯಾದ್ಯಂತ ಕೇಂದ್ರೀಯ ಪಠ್ಯಕ್ರಮಕ್ಕನುಗುಣವಾಗಿ ವಿದ್ಯಾರ್ಥಿಗಳು ಏಕರೂಪವಾದ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಸಮಾಜವಿಜ್ಞಾನ ಪಠ್ಯಪುಸ್ತಕವನ್ನು ಸಹ ಪರಿಷ್ಕರಿಸಿ 2018–19ನೇ ಸಾಲಿನಿಂದ ಅನುಷ್ಠಾನ ಮಾಡಲಾಗುತ್ತಿದೆ. ಬದಲಾವಣೆಯಾಗುತ್ತಿರುವ ಸನ್ನಿವೇಶದಲ್ಲಿ ವಿಷಯಗಳ ಪಠ್ಯವಸ್ತುವು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು ಅದಕ್ಕೆ ತಕ್ಕಂತೆ ಮಾನದಂಡವನ್ನು ರಚಿಸಿ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟವನ್ನು ಅಳೆಯಬೇಕಾಗಿರುವುದರಿಂದ ಪ್ರಶ್ನೆಪತ್ರಿಕೆ ವಿನ್ಯಾಸ ಬದಲಾವಣೆ ಮಾಡುವುದು ಅನಿವಾರ್ಯವಾಗಿದೆ. ಪ್ರಶ್ನೆಪತ್ರಿಕೆಗಳನ್ನು ಇಡೀ ರಾಜ್ಯಾದ್ಯಾಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೆಗೆದುಕೊಳ್ಳುವ ಸುಮಾರು 8 ಲಕ್ಷ ವಿಭಿನ್ನ ಮಾನಸಿಕ ಮತ್ತು ಬೌದ್ಧಿಕ ಮಟ್ಟವನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಬೇಕಾಗುತ್ತದೆ. ಕೇವಲ ಕಂಠಪಾಠ ಮಾಡಿ ಉತ್ತರ ಬರೆಯುವುದು, ನೆನಪಿನ ಶಕ್ತಿಯಿಂದ ಮಾತ್ರ ಉತ್ತರಿಸುವುದನ್ನು ಪ್ರೋತ್ಸಾಹಿಸದೇ, ತಾರ್ಕಿಕ ಚಿಂತನೆಯನ್ನು ಬೆಳೆಸುವ, ದತ್ತಾಂಶಗಳ ಅರ್ಥ ವಿವರಣೆಯನ್ನು ನೀಡುವ, ಹೋಲಿಕೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳುವಂತಹ, ಹಾಗೂ ಅನ್ವಯ, ಕೌಶಲ್ಯ ಹೊಂದಿರುವಂತಹ ಪ್ರಶ್ನೆಗಳನ್ನು ಪ್ರಶ್ನೆಪತ್ರಿಕೆ ಒಳಗೊಳ್ಳಬೇಕಾಗುತ್ತದೆ. ಕಲಿಕಾ ಪ್ರಕ್ರಿಯೆ ಮತ್ತು ಮೌಲ್ಯಮಾಪನ ಒಂದಕ್ಕೊಂದು ಪೂರಕವಾಗಿರುವುದರಿಂದ ಪ್ರಶ್ನೆಪತ್ರಿಕೆಗಳ ಗುಣಮಟ್ಟ ಹೆಚ್ಚಿದಂತೆ ಬೋಧನ ಕಲಿಕಾ ಪ್ರಕ್ರಿಯೆಯಲ್ಲಿಯೂ ಗಮನಾರ್ಹ ಸುಧಾರಣೆ ಕಂಡು ಬರುತ್ತದೆ.

ಪ್ರಸ್ತುತ ಪ್ರಶ್ನೆಪತ್ರಿಕೆ ಸ್ವರೂಪದ ಬದಲಾವಣೆಯಲ್ಲಿ ಬಹು ಆಯ್ಕೆ ಹಾಗೂ ಕಿರು ಉತ್ತರದ ಪ್ರಶ್ನೆ ಸಂಖ್ಯೆಗಳನ್ನು ಕಡಿಮೆ ಮಾಡಿ, ಅನ್ವಯ, ಕೌಶಲ್ಯ ಹಾಗೂ ವಿವರಣಾತ್ಮಕ ಹೊಂದಿರುವ ದೀರ್ಘಾವಧಿ ಪ್ರಶ್ನೆಗಳಿಗೆ ಆದ್ಯತೆ ನೀಡಿ ಹೊಸದಾಗಿ ಐದು ಅಂಕದ ಒಂದು ಪ್ರಶ್ನೆಯನ್ನು ಸೇರ್ಪಡೆ ಮಾಡಲಾಗಿದೆ. ಎಲ್ಲಾ ವಿಷಯಗಳ ಪ್ರಶ್ನೆಪತ್ರಿಕೆಗಳಲ್ಲೂ ಕಠಿಣತೆಯ ಮಟ್ಟದಲ್ಲಿ ಸಮಾನತೆ ರೂಪಿಸಲಾಗಿದೆ. ಪ್ರತಿ ವಿಷಯವಾರು ನೀಲನಕಾಶೆ ಹಾಗೂ ಪಠ್ಯಪುಸ್ತಕದಲ್ಲಿನ ಘಟಕವಾರು ಅಂಕಗಳನ್ನು ನಿಗದಿಪಡಿಸಿ ನೀಡದೇ, ಮುಖ್ಯಾಂಶ ಆಧಾರಿತ / ವಿಷಯಾಧಾರಿತ (Theme based) ಅಂಕಗಳನ್ನು ಹಂಚಿಕೆ ಮಾಡಿ ವಿಷಯವಾರು ಉದ್ದಿಷ್ಟಗಳು (Objectives), ಪಠ್ಯವಸ್ತು (Content), ಪ್ರಶ್ನೆಗಳ ಸ್ವರೂಪ (Type of Questions) ಇವುಗಳಿಗೆ ಒತ್ತು ನೀಡಿರುವುದು ವೈಜ್ಞಾನಿಕ ಹಾಗೂ ತಾರ್ಕಿಕವಾಗಿದೆ.

- ಪ್ರಶ್ನೆಪತ್ರಿಕೆ ಸ್ವರೂಪದ ಬದಲಾವಣೆಯ ಜಾರಿಯಾದ ನಂತರ ಪಠ್ಯಪುಸ್ತಕದ ಅಭ್ಯಾಸದಲ್ಲಿರುವ ಹಾಗೂ ಪಠ್ಯಪುಸ್ತಕದೊಳಗಿನ ಅಂಶಗಳ ಮೇಲಿನ ಪ್ರಶ್ನೆಗಳನ್ನು ಕ್ರಮೇಣವಾಗಿ ಕಡಿಮೆ ಮಾಡಿ ಪಠ್ಯಪುಸ್ತಕದಲ್ಲಿರುವ ಪರಿಕಲ್ಪನೆಗಳನ್ನು ಆಧರಿಸಿ ಹೊಸ ಸನ್ನಿವೇಶದಲ್ಲಿ ಅನ್ವಯ ಕೌಶಲ್ಯದ ಪ್ರಶ್ನೆಗಳನ್ನು ಪ್ರಶ್ನೆಪತ್ರಿಕೆಯಲ್ಲಿ ಅಳವಡಿಸುವುದರಿಂದ ವಿದ್ಯಾರ್ಥಿಗಳಿಗೆ ಸೃಜನತೆ ಹಾಗೂ ತಾರ್ಕಿಕ ಚಿಂತನೆಗೆ ಒಳಪಡಿಸುವುದು.
- ಪಠ್ಯಪುಸ್ತಕದಲ್ಲಿರುವ ಪರಿಕಲ್ಪನೆಗಳ ಕಂಠಪಾಠ, ಉರುಹೊಡೆಯುವ ಹಾಗೂ ನೆನಪಿನ ಶಕ್ತಿಯ ಆಧಾರದ ಮೇಲೆ ಉತ್ತರಿಸುವ ಪದ್ಧತಿಗೆ ಕ್ರಮೇಣವಾಗಿಕಡಿಮೆ ಮಾಡಿ ಹೊಸ ನಾವಿನ್ಯತೆಯೊಂದಿಗೆ ಚಿಂತನೆ ಮಾಡಿ ಉತ್ತರಿಸಲು ಒತ್ತು ನೀಡುವುದು.
- ಪಠ್ಯಪುಸ್ತಕದಲ್ಲಿರುವ ಪರಿಕಲ್ಪನೆಗಳನ್ನೇ ಒಂದು ಅಥವಾ ಇನ್ನೊಂದು ರೂಪದಲ್ಲಿ ಪದೇ ಪದೇ ಅದೇ ರೀತಿಯ ಪ್ರಶ್ನೆಗಳನ್ನು ಪ್ರಶ್ನೆಪತ್ರಿಕೆಗಳಲ್ಲಿ ಅಳವಡಿಸಿ ಕೇಳುವುದರಿಂದ ನೆನಪಿನ ಶಕ್ತಿಯಿಂದ ಜ್ಞಾನದ ಪ್ರಶ್ನೆಗಳಾಗಿ ಎಲ್ಲಾ ವಿದ್ಯಾರ್ಥಿಗಳು ಉತ್ತರಿಸುವುದರಿಂದ ಅರ್ಥಪೂರ್ಣ ಎನಿಸುವುದಿಲ್ಲ. ಆದ್ದರಿಂದ ಪ್ರಶ್ನೆಪತ್ರಿಕೆ ಸ್ವರೂಪದ ಬದಲಾವಣೆ ಅತ್ಯವಶ್ಯಕವಾಗಿರುತ್ತದೆ.
- ಪ್ರಶ್ನೆಪತ್ರಿಕೆ ಸ್ವರೂಪದ ಬದಲಾವಣೆಯಿಂದ ಪ್ರಶ್ನೆಪತ್ರಿಕೆ ರಚನೆಕಾರರು ಹೊಸ ಸನ್ನಿವೇಶದಲ್ಲಿ ಪಠ್ಯಪುಸ್ತಕ ಆಧರಿಸಿ ಪ್ರಶ್ನೆಗಳನ್ನು ರಚಿಸುವುದರಿಂದ ಶಿಕ್ಷಕರಿಗೂ ಸಂಶೋಧನಾತ್ಮಕ ಹಾಗೂ ಚಿಂತನೆಗೆ ಒಳಪಡಿಸಿ ಅನ್ವಯಕೌಶಲ್ಯದ ಪ್ರಶ್ನೆಗಳನ್ನು ಒಂದು ಪ್ರಶ್ನೆಪತ್ರಿಕೆಯಿಂದ ಇನ್ನೊಂದು ಪ್ರಶ್ನೆಪತ್ರಿಕೆಗೆ ಪ್ರತ್ಯೇಕವಾದ ಪರಿಕಲ್ಪನೆಗಳನ್ನು ಆಧರಿಸಿ ಪ್ರಶ್ನೆಪತ್ರಿಕೆ ರಚಿಸುವುದರಿಂದ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಿದಂತಾಗುತ್ತದೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ತನ್ನದೇ ಆದ ರೀತಿ ಹೊಸ ಅಂಶಗಳ ಕಲಿಕೆಗೆ ಪೂರಕವಾಗಿ ಸಹಾಯವಾಗುತ್ತದೆ.
- ಪ್ರಶ್ನೆಪತ್ರಿಕೆ ಸ್ವರೂಪದ ಬದಲಾವಣೆಯಾದ ನಂತರ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ವಿಷಯಾವಾರು ನೀಲನಕಾಶೆಯಾಗಲಿ ಅಥವಾ ಅಧ್ಯಾಯವಾರು ಅಂಕಗಳನ್ನು ನಿಗದಿಪಡಿಸಿ ನೀಡುವಪದ್ದತಿಯನ್ನು ರದ್ದುಪಡಿಸಿ ವಿಷಯಾವಾರು ವಿಷಯಾಧಾರಿತ(Theme based) ಆಧಾರದ ಮೇಲೆ ಅಂಕಗಳನ್ನು ನಿಗದಿಪಡಿಸುವುದರಿಂದ ವಿಷಯಾಧಾರಿತ(Theme based) ದಲ್ಲಿ ಒಳಪಡುವ ಎಲ್ಲಾ ಅಧ್ಯಾಯಗಳಿಗೆ ಅಂಕಗಳನ್ನು ನಿಗದಿಪಡಿಸದೇ ಇರುವುದರಿಂದ ಹಾಗೂ ಯಾವುದೇ ಅಧ್ಯಾಯಕ್ಕಾದರೂ ವಿವಿಧ ರೀತಿಗಳಲ್ಲಿ ಅಂಕಗಳನ್ನು ನಿಗದಿಪಡಿಸಿ ಪ್ರಶ್ನೆಗಳನ್ನು ರಚಿಸಲು ಅವಕಾಶವಿರುವುದರಿಂದ ಶಿಕ್ಷಕರು ಯಾವುದೇ ಅಧ್ಯಾಯಗಳನ್ನು ಕಡೆಗಣಿಸದೇ ಎಲ್ಲಾ ಅಧ್ಯಾಯಗಳಿಗೂ ಸಮಾನವಾದ ಕಲಿಕೆಯ ಅವಕಾಶ ನೀಡಬೇಕಾಗುತ್ತದೆ. ಹಾಗೆಯೇ ವಿದ್ಯಾರ್ಥಿಗಳು ಕೂಡ ಯಾವ ಅಧ್ಯಾಯಗಳಲ್ಲಿ ಪ್ರಶ್ನೆಗಳನ್ನು ಕೇಳುತ್ತಾರೆ ಅಥವಾ ಕೇಳುವುದಿಲ್ಲ ಎಂದು ಊಹಿಸಲು ಸಾಧ್ಯವಾಗದ ಕಾರಣ ಹಾಗೂ ಯಾವ ಅಧ್ಯಾಯಕ್ಕೆ ಇಂತಿಷ್ಟು ಅಂಕಗಳ ಮೇಲೆ ಪ್ರಶ್ನೆಗಳನ್ನು ರಚಿಸಲಾಗುತ್ತದೆ ಎಂದು ಗೊತ್ತಿರದ ಪ್ರಯುಕ್ತ ಎಲ್ಲಾ ಅಧ್ಯಾಯಗಳಿಗೂ ಸಮಾನ ಅವಕಾಶ ನೀಡಿ ಅಭ್ಯಾಸ ಮಾಡಲು ಈ ಪ್ರಶ್ನೆಪತ್ರಿಕೆ ಸ್ವರೂಪವು ಬದಲಾವಣೆ ಅವಕಾಶ ನೀಡುತ್ತದೆ.

- ಪ್ರಶ್ನೆಪತ್ರಿಕೆ ಸ್ವರೂಪದ ಬದಲಾವಣೆಯ ಜಾರಿ ಬರುವ ಪೂರ್ವದ ಪ್ರಶ್ನೆಪತ್ರಿಕೆಗಳಲ್ಲಿ ಬಹುಆಯ್ಕೆ ಪ್ರಶ್ನೆ, ಅತೀ ಕಿರು ಉತ್ತರದ ಪ್ರಶ್ನೆಗಳು, ಕಿರು ಉತ್ತರದ ಪ್ರಶ್ನೆಗಳು ಹೆಚ್ಚು ಇದ್ದು, ದೀರ್ಘಾವಧಿ ಪ್ರಶ್ನೆಗಳು ಕಡಿಮೆ ಇದ್ದ ಪ್ರಯುಕ್ತ ಕೆಲವು ವಿದ್ಯಾರ್ಥಿಗಳು ದೀರ್ಘಾವಧಿ ಪ್ರಶ್ನೆಗಳನ್ನು ಕಡೆಗಣಿಸಿ ಬಹು ಆಯ್ಕೆ ಪ್ರಶ್ನೆಗಳು, ಅತಿಕಿರು ಹಾಗೂ ಕಿರುಉತ್ತರದ ಪ್ರಶ್ನೆಗಳಿಗೆ ಮಾತ್ರ ಪ್ರಾಶಸ್ತ್ಯ ನೀಡಿ ಉತ್ತೀರ್ಣರಾಗುತ್ತಿದ್ದರು. ಸದರಿ ಪ್ರಶ್ನೆಪತ್ರಿಕೆಯಲ್ಲಿ ಇದಕ್ಕೆ ಅವಕಾಶವಿರುವುದಿಲ್ಲ.
- ಪ್ರಶ್ನೆಗಳ ಆಯ್ಕೆ (Choice Questions) ಈ ಮೊದಲು ಕೆಲವೊಂದು ವಿಷಯಗಳಲ್ಲಿ ಘಟಕದೊಳಗಿನಿಂದಲೇ (within the unit) ಪ್ರಶ್ನೆಗಳ ಆಯ್ಕೆ ರಚಿಸಲಾಗುತ್ತಿತ್ತು. ವಿಷಯಾಧಾರಿತ (Theme based)ಆಧಾರದ ಮೇಲೆ ಅಂಕಗಳನ್ನು ನಿಗದಿ ಪಡಿಸುವುದರಿಂದ, ವಿಷಯಾಧಾರಿತದೊಳಗಿನ ಯಾವುದೇ ಅಧ್ಯಾಯದಿಂದ ಪ್ರಶ್ನೆಗಳ ಆಯ್ಕೆ(Choice Questions)ಗಳನ್ನು ರಚಿಸಲು ಅವಕಾಶವಿದೆ.
- ಬಹುಆಯ್ಕೆ ಒಂದು ವಾಕ್ಯದ ಅಥವಾ ಎರಡು ವಾಕ್ಯದ ಪ್ರಶ್ನೆಗಳು, ಕಡಿಮೆ ಇರುವುದರಿಂದ ಸಾಮೂಹಿಕ ನಕಲು ತಡೆಯಲು ಸಹಕಾರಿಯಾಗುವುದಲ್ಲದೇ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಸಹಕಾರಿಯಾಗಿದೆ.
- ಭಾಷಾವಾರು ಹಾಗೂ ಕೋರ್ ವಿಷಯಗಳಲ್ಲಿ ದೀರ್ಘಾವಧಿ ಪ್ರಶ್ನೆಗಳಿಗೆ ಹೆಚ್ಚಿನ ಆದ್ಯತೆ ನೀಡಿರುವುದರಿಂದ ಬರವಣಿಗೆ ಕೌಶಲ್ಯ ಹಾಗೂ ಅಭಿವ್ಯಕ್ತಿ ಕೌಶಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಸುಧಾರಣೆ ಮಾಡಿಕೊಳ್ಳಲು ಸಹಕಾರಿಯಾಗಿದೆ.
- ಬಹು ಆಯ್ಕೆ ಹಾಗೂ ಕಿರುಉತ್ತರದ ಪ್ರಶ್ನೆಗಳನ್ನು ಕಡಿಮೆ ಮಾಡಿ ದೀರ್ಘಾವಧಿ ಪ್ರಶ್ನೆಗಳನ್ನು ಹೆಚ್ಚಿಗೆ ನೀಡುವುದರಿಂದ ಜ್ಞಾನ ಹಾಗೂ ಗ್ರಹಿಕೆಯ ಉದ್ದಿಷ್ಟಗಳಿಗೆ ಕಡಿಮೆ ಮಾಡಿ ವಿದ್ಯಾರ್ಥಿಗಳ ಸೃಜನಶೀಲತೆ ಹಾಗೂ ತಾರ್ಕಿಕ ಚಿಂತನೆಗೆ ಒಳಪಡಿಸುವ ಅನ್ವಯ ಕೌಶಲ್ಯ, ಅಭಿವ್ಯಕ್ತಿ ಕೌಶಲ್ಯಗಳ ಉದ್ದಿಷ್ಟತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಪರಿಷ್ಕೃತ ಪ್ರಶ್ನೆಪತ್ರಿಕೆ ಸ್ವರೂಪದ ಬದಲಾವಣೆಯಿಂದ ಹಾಗೂ ವಿಷಯಾಧಾರಿತ (Theme based) ಅಂಕಗಳನ್ನು ಹಂಚಿಕೆ ಮಾಡುವುದರಿಂದ ಕೆಳಕಂಡಂತೆ ಪ್ರಯೋಜನ ಪಡೆಯಬಹುದಾಗಿದೆ.

- ಶಿಕ್ಷಕರು ಎಲ್ಲಾ ಅಧ್ಯಾಯಗಳನ್ನು ಬೋಧನೆ ಮಾಡುವುದು ಕಡ್ಡಾಯವಾಗಿರುತ್ತದೆ.
- ಪ್ರಸ್ತುತ ಪರೀಕ್ಷಾ ಪದ್ದತಿಯಲ್ಲಿ ಸಾಧಾರಣವಾಗಿ ಕೇಳಿಬರುವ ಸಾಮೂಹಿಕ ನಕಲನ್ನು ತಡೆಗಟ್ಟಬಹುದು.
- ಮಕ್ಕಳಲ್ಲಿ ಸೃಜನಶೀಲತೆ ಹಾಗೂ ತಾರ್ಕಿಕ ಚಿಂತನೆ ಮೂಡಿಸಬಹುದು.
- ದೀರ್ಘ ಉತ್ತರದ ಪ್ರಶ್ನೆಗಳಿಂದ ಮಕ್ಕಳಲ್ಲಿ ಬರವಣಿಗೆಯ ಕೌಶಲ್ಯ ಹಾಗೂ ನಾವಿನ್ಯತೆಯನ್ನು ಮೂಡಿಸಬಹುದು.
- ಮಕ್ಕಳಲ್ಲಿ ಅಭಿವ್ಯಕ್ತಿ ಕೌಶಲ್ಯ ಬೆಳೆಸುತ್ತದೆ.
- ಶಿಕ್ಷಕರಲ್ಲಿ ಬೋಧನಾ ನಾವೀನ್ಯತೆ ಬಳಸಿ ಹೊಸ ತಂತ್ರಜ್ಞಾನ ಬಳಸುವ ಅರಿವು ಮೂಡಿಸುತ್ತದೆ.

ಈ ರೀತಿಯಾಗಿ ಬದಲಾದ ಪ್ರಶ್ನೆ ಪತ್ರಿಕೆ ವಿನ್ಯಾಸವು ಬೋಧನಾ ಕಲಿಕಾ ಗುಣಮಟ್ಟವನ್ನು ಸುಧಾರಿಸಲು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಹಾಗೂ ತಾರ್ಕಿಕ ಚಿಂತನೆ ಬೆಳೆಸುವುದರೊಂದಿಗೆ ಹೊಸ ನಾವಿನ್ಯತೆಯ ಬೋಧನಾ ಕಲಿಕೆ ಅನುಭವ ಪಡೆಯುವುದರೊಂದಿಗೆ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಸುಧಾರಿಸಲು ಸಹಕಾರಿಯಾಗಿದೆ.

********